ದಿನಾಂಕಃ 25-01-2016

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ಃ ಶ್ರೀ ಬಿ ಜೆ ಆರ್ ವಕೀಲರಿಂದ ಃ –

ಪ್ರತಿವಾದಿಯರು ನನ್ನ ಕುಲಸ್ಥರು , ಆದರೆ ಸಂಬಂಧಿಕರಲ್ಲ. ಪ್ರತಿವಾದಿಯರನ್ನು ಸುಮಾರು 15 ವರ್ಷಗಳಿಂದ ನೋಡುತ್ತಿದ್ದೇನೆ. ಪ್ರತಿವಾದಿಯರು ಮತ್ತು ನಾನು ಒಂದೇ ಊರಿನಲ್ಲಿ ವಾಸಿಸುತ್ತಿಲ್ಲ. ಹೇಮ್‌ದೊರೆ ಗ್ರಾಮದ ವ್ಯಾಪ್ತಿಯಲ್ಲಿ ನನ್ನದು ಆಸ್ತಿ ಇಲ್ಲ. ದಾವಾ ಆಸ್ತಿಯನ್ನು ನೋಡಿದ್ದೇನೆ. ಅದರ ಅಕ್ಕಪಕ್ಕದಲ್ಲಿ ನನಗೆ ಸೇರಿದ ಯಾವುದೇ ಆಸ್ತಿ ಇಲ್ಲ. ನಾನು ಜಮೀನನ್ನು ಕೊಳ್ಳುವ ಅಥವಾ ಮಾರಾಟ ಮಾಡುವ ವ್ಯವಹಾರ ಮಾಡುತ್ತಿಲ್ಲ. 2006 ನೇ ಇಸವಿಯಿಂದ ಈಚೆಗೆ ದಾವಾ ಸ್ವತ್ತಿನ ಅಕ್ಕಪಕ್ಕದ ಜಮೀನುಗಳು ಕ್ರಯವಾಗಿರುವುದನ್ನು ಹಾಗೂ ಕ್ರಯಪತ್ರ ಬರೆಸಿರುವುದನ್ನು ನಾನು ನೋಡಿಲ್ಲ.

ನಾನು ಯಾವುದೇ ಆಸ್ತಿಗಳನ್ನು ಮಾರಾಟ ಮಾಡಿಲ್ಲ ಹಾಗೂ ಕೊಂಡುಕೊಂಡಿಲ್ಲ. ಯಾವುದೇ ಅಸ್ತಿಯನ್ನು ಮಾರಾಟ ಮಾಡಬೇಕಾದರೆ ಕ್ರಯಪತ್ರ ಅಥವಾ ಕರಾರುಪತ್ರದಲ್ಲಿ ಸದರಿ ಆಸ್ತಿಗೆ ಉಪನೊಂದಣಿ ಅಧಿಕಾರಿಗಳ ಮಾರುಕಟ್ಟೆ ಮೌಲ್ಯ ಎಷ್ಟಿರುತ್ತದೋ ಅದನ್ನು ಮಾತ್ರ ಬರೆಸುತ್ತಾರೆ ಎಂದರೆ ನಿಜ.

ದಾವಾ ಸ್ವತ್ತು ಪ್ರತಿವಾದಿಗೆ ಮಂಜೂರಾಗಿರುವ ಬಗ್ಗೆ ಯಾವುದೇ ದಾಖಲೆ ನೋಡಿಲ್ಲ. ದಾವಾ ಸ್ವತ್ತು ಮಂಜೂರಾಗಿದೆ ಎಂದು ಪ್ರತಿವಾದಿಯರು ಹೇಳಿದ್ದರಿಂದ , ದಾವಾ ಆಸ್ತಿ ಪ್ರತಿವಾದಿಯರಿಗೆ ಮಂಜೂರಾಗಿದೆ ಎಂದು ಹೇಳುತ್ತಿದ್ದೇನೆ ಎಂದರೆ ನಿಜ. ದಾವಾ ಆಸ್ತಿ ಅಥವಾ ಅದರ ಅಕ್ಕಪಕ್ಕದ ಜಮೀನುಗಳನ್ನು ವ್ಯವಸಾಯೇತರ ಉದ್ದೇಶಕ್ಕೆ ಭೂ-ಪರಿವರ್ತನೆ ಮಾಡಿಸಿರುವುದನ್ನು ನಾನು ನೋಡಿಲ್ಲ. ದಾವಾ ಆಸ್ತಿ ಬೆಲೆ 2006 ನೇ ಇಸವಿಯಲ್ಲಿ ಎಕರೆಗೆ 4 ಲಕ್ಷ ಬಾಳುತ್ತಿತ್ತು ಎಂದು ಯಾವ ದಾಖಲೆಯ ಮೇಲೆ ಹೇಳುತ್ತೀರಿ? ಎಂದರೆ , ಸದರಿ ಆಸ್ತಿ ಊರಿಗೆ ಹೊಂದಿಕೊಂಡಿರುವುದರಿಂದ ಅದರ ಬೆಲೆ ಎಕರೆಗೆ 4 ಲಕ್ಷ ಎಂದು ಹೇಳಿರುತ್ತೇನೆ. ದಾವಾ ಆಸ್ತಿಯ ಅಕ್ಕಪಕ್ಕದ ಜಮೀನುಗಳು ಎಕರೆಗೆ 4

ಲಕ್ಷಕ್ಕಿಂತ ಹೆಚ್ಚು ಮೌಲ್ಯಕ್ಕೆ ಮಾರಾಟವಾಗಿರುವುದನ್ನು ನಾನು ನೋಡಿಲ್ಲ. ದಾವಾ ಆಸ್ತಿಯ ಬೆಲೆ ಪ್ರಸ್ತುತ ಎಕರೆಗೆ 15 ರಿಂದ 20 ಲಕ್ಷ ರೂ. ಇರುವ ಬಗ್ಗೆ ಯಾವುದೇ ದಾಖಲೆಯನ್ನು ನೋಡಿಲ್ಲ. ಸದರಿ ವಿಚಾರಗಳನ್ನು ನನ್ನ ಅನುಭವದ ಮೇಲೆ ಹೇಳುತ್ತಿದ್ದೇನೆ ಎಂದರೆ ಗೊತ್ತಿರುವುದರಿಂದ ಹೇಳುತ್ತಿದ್ದೇನೆ. ಪ್ರತಿವಾದಿಯರು ನನಗೆ ಕುಲಸ್ಥರಿರುವುದರಿಂದ , ಸದರಿಯವರ ವಿಶ್ವಾಸದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ನಾನು ದಾವಾ ಸ್ವತ್ತನ್ನು ನೋಡಿಲ್ಲ ಎಂದರೆ ಸುಳ್ಳು.

ದಾವಾ ಸ್ವತ್ತಿನ ಚೆಕ್ಕು ಬಂದಿ ಗೊತ್ತಿದೆ. ಪೂರ್ವಕ್ಕೆ : ನಾಗರಾಜುವರ ಜಮೀನು , ಪಶ್ಚಿಮಕ್ಕೆ : ರಸ್ತೆ , ಉತ್ತರಕ್ಕೆ : ಗ್ರಾಮಠಾಣಾ , ದಕ್ಷಿಣಕ್ಕೆ : ಭೀಮಣ್ಣನವರ ಜಮೀನು. ನಾನು ದಾವಾ ಸ್ವತ್ತನ್ನು ಎಂದೂ ಅನುಭವಮಾಡಿಲ್ಲ. ದಾವಾ ಸ್ವತ್ತಿನ ಅಕ್ಕಪಕ್ಕದ ಜಮೀನುಗಳನ್ನು ನಾನು ಅನುಭವಮಾಡಿಲ್ಲ ಎಂದರೆ ನಿಜ. ಪ್ರತಿವಾದಿಗಳು ಹೇಳಿಕೊಟ್ಟಂತೆ ದಾವಾ ಸ್ವತ್ತಿನ ಚೆಕ್ಕುಬಂದಿ ಹೇಳುತ್ತಿದ್ದೇನೆ ಎಂದರೆ ಸುಳ್ಳು. ದಾವಾ ಸ್ವತ್ತಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರ್‌ಗೊಳಿಸಿ ಪ್ರಿಂಟ್ ತೆಗೆಯಲಾಯಿತು)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಸಿರಾ.